1. ಹೊಸ ತೋಟಗಳ ಪ್ರದೇಶ ವಿಸ್ತರಣೆ (ಹಣ್ಣುಗಳು, ಪುಷ್ಪಾಭಿವೃದ್ಧಿ ಬೆಳೆ),
2. ನಿರ್ವಹಣೆ – ಹಣ್ಣುಗಳು(1 ಮತ್ತು 2ನೇ ವರ್ಷದ ನಿರ್ವಹಣೆ)
3. ಪುನಶ್ಚೇತನ ಕಾರ್ಯಕ್ರಮ
4. ಸಮುದಾಯ ಕೆರೆ
5. ಸಂರಕ್ಷಿತ ಬೇಸಾಯ (ನೆರಳು ಪರದೆ ಮತ್ತು ಪಕ್ಷಿ ನಿರೋದಕ ಬಲೆ)
6. ಸಮಗ್ರ ಕೀಟ ನಿರ್ವಹಣೆ ಮತ್ತು ಸಮಗ್ರ ರೋಗ ನಿರ್ವಹಣೆ
7. ಸಾವಯವ ಕೃಷಿ (ಎರೆಹುಳು ಘಟಕ ಮತ್ತು ಜೀವಸಾರ ಘಟಕ)
8. ಮಾನವ ಸಂಪನ್ಮೂಲ ಅಭಿವೃದ್ಧಿ
9. ಪ್ಯಾಕ್ ಹೌಸ್
10. ಪ್ರಾಥಮಿಕ ಸಂಸ್ಕರಣಾ ಘಟಕ
11. ದಾಳಿಂಬೆ ಪುನಃಶ್ಚೇತನ ಕಾರ್ಯಕ್ರಮ

ಆ) ಈ ಕಾರ್ಯಕ್ರಮಗಳಿಗೆ ಯೋಜನೆ ಆರಂಭದಿಂದ ಅಂದರೆ, 2005–06ರಿಂದ 2009–10ರವರೆಗೆ ರೂ.413.675 ಲಕ್ಷ ಅನುದಾನ ಬಿಡುಗಡೆಯಾಗಿದೆ; ಪೂರ್ಣ ಅನುದಾನ ಬಿಡುಗಡೆಯಾಗಿದ್ದು, ಬಿಡುಗಡೆ ಆಗಬೇಕಾದ ಅನುದಾನ ಬಾಕಿಯಿರುವುದಿಲ್ಲ.

ಇ) ಈ ಕಾರ್ಯಕ್ರಮದಡಿ ಫಲಾನುಭವಿಗಳಿಗೆ ಅನುದಾನವು ಸಹಾಯಧನ ರೂಪದಲ್ಲಿ ನೀಡುತ್ತಿದ್ದ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಾಲ ಇರುವುದಿಲ್ಲ.

ಮೇಲ್ದರ್ಜೆಗೇರಿಸಲ್ಪಟ್ಟ ರಸ್ತೆಗಳು

179(323) ಡಾ: ಬಗಲಿ ಸಾರ್ವಭೌಮ ಸಾತಗೌಡ:(ಇಂಡಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್‌ನಿಂದ ಮೇಲ್ದರ್ಜೆಗೇರಿಸಲ್ಪಟ್ಟ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಯಾವುವು

ಆ) ಈ ರಸ್ತೆಗಳ ಸುಧಾರಣೆಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನವೆಷ್ಟು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್‌ನಿಂದ ಮೇಲ್ದರ್ಜೆಗೇರಿಸಿದ ರಸ್ತೆಗಳ ಸಂಖ್ಯೆ 15 ಇದ್ದು ಒಟ್ಟು ಉದ್ದ 141.80 ಕಿಮೀ ಇರುತ್ತದೆ. ರಸ್ತೆಗಳ ವಿವರ ಈ ಕೆಳಗಿನಂತಿವೆ.

ಕ್ರ ಸಂ	ರಸ್ತೆಯ ಹೆಸರು	ಉದ್ದ (ಕಿಮೀ.ಗಳಲ್ಲಿ)
1	ರೂಗಿ ಕ್ರಾಸ್‌ದಿಂದ ಹಿರೇಮಸಳಿ ರಸ್ತೆ	9.50
2	ಲಾಳಸಂಗಿ ಶಿವಪೂರ ಕೆಡಿಯಿಂದ ರೂಡಗಿ ರಸ್ತೆ	11.00
3	ರಾಮತೀರ್ಥ ಕೊಟ್ಟನಾಳ ಅಗಸನಾಳ ರಸ್ತೆ	11.20
4	ನಾದ ಗೊಳಸಾರ ಮಿರಗಿ ರಸ್ತೆ	11.00
5	ಬತಗುಣಕಿ ನಂದ್ರಾಳ ಬರಗೂಡಿ ರಸ್ತೆ	7.60
6	ರೂಗಿ ಯಿಂದ ಸಾಲೋಟಗಿ ರಸ್ತೆ	10.00
7	ಇಂಗಳಗಿ ಆಲೂರ ಲಚ್ಯಾಣ ರಸ್ತೆ	9.50
8	ಹಿರೆಬೆವನೂರ ಬಾಯ್ಯಾರ ನಾಗರಳ್ಳಿ ಖೇಡಗಿ ರಸ್ತೆ	11.50
9	ಅಹಿರಸಂಗ ಭೈರೂಣಗಿ ಬಸಗುಣಕಿ ರಾಂಪೂರದಿಂದ ರಾಹೆ–13 ಕ್ಕೆ ಕೂಡು ರಸ್ತೆ	12.50
10	ಅಥರ್ಗಾ ಹೊನ್ನಳ್ಳಿ ಜಂಬಗಿ ರಸ್ತೆ	7.00
11	ನಾದ ಕೆಡಿಯಿಂದ ಅರ್ಜುಣಗಿ ಬಿಕೆ ಗೊಳಸಾರ ರಸ್ತೆ	8.50
12	ಶಿರಡ್ಯಾಣ, ತೆಗ್ಗಿಹಳ್ಳಿ ರಸ್ತೆ	5.00
13	ಖೇಡಗಿ ರೋಡಗಿ ಮಿರಗಿ ರಸ್ತೆ	8.00
14	ರಾಜನಾಳ ಮಿಂಚನಾಳ ತಾಂಡಾ ರಸ್ತೆ ಮಾರ್ಗ ದಡ್ಡಿ	8.00
15	ತಾಂಬಾ ಕೆಂಗನಾಳ ಶಿರಕನಳ್ಳಿ	11.50
	ಒಟ್ಟು	141.80

ಆ) ಈ ರಸ್ತೆಗಳ ಸುಧಾರಣೆಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಿದ ಅನುದಾನ ರೂ. 173.58 ಲಕ್ಷಗಳು.

ರಸ್ತೆ ಕಾಮಗಾರಿ

180(316) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ವಾಗದರಿ–ರಿಬ್ಬನಪಲ್ಲಿ ರಸ್ತೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು ಎಷ್ಟು ದಿವಸಗಳಲ್ಲಿ ಈ ಕೆಲಸ ಪೂರ್ಣಗೊಳಿಸಲಗುವುದು; ಈ ಅವಧಿಯಲ್ಲಿ ಈ ರಸ್ತೆಯ ನಿರ್ವಹಣೆ ಕಾರ್ಯದ ಜವಾಬ್ದಾರಿ ಯಾರದ್ದು, (ವಿವರ ಒದಗಿಸುವುದು)?

ಶ್ರೀ ಸಿ ಎಂ ಉದಾಸಿ(ಮಾನ್ಯ ಲೋಕೋಪಯೋಗಿ ಸಚಿವರು):

ಆ) ದಿನಾಂಕ 04–06–2010ರಂದು ರಿಯಾಯಿತಿದಾರರೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡಿದ್ದು, ಕರಾರು ನಿಬಂಧನೆ 24ರಂತೆ ಕರಾರು ಒಪ್ಪಂದದ ದಿನಾಂಕದಿಂದ 6 ತಿಂಗಳ ಅವಧಿಯಲ್ಲಿ ರಿಯಾಯಿತಿದಾರರು Financial Closure ಪಡೆದು ಅಂದಿನಿಂದ ನಿಬಂಧನೆ 12ರ 12.4ರಂತೆ 24 ತಿಂಗಳ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗುತ್ತದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕಾಮಗಾರಿ ಪ್ರಾರಂಭ ಮಾಡುವವರೆಗೂ ನಿರ್ವಹಣೆ ಜವಾಬ್ದಾರಿಯು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡರವರಿಗೆ ಒಳಪಟ್ಟಿರುತ್ತದೆ.

ಜಿಲ್ಲಾ ಮುಖ್ಯರಸ್ತೆ ದುರಸ್ತಿ

181(317) ಡಾ: ಶರಣಪ್ರಕಾಶ್ ಪಾಟೀಲ:(ಸೇಡಂ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಮತಕ್ಷೇತ್ರದಲ್ಲಿರುವ ಜಿಲ್ಲಾ ಮುಖ್ಯ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.